# ಸಚಿತ್ರ–ಯಾತ್ರೆ

ಭಾರತ ತೀರ್ಥಕ್ಷೇತ್ರಗಳ ನಾಡು. ಭಗವಂತನ ದಿವ್ಯ ಸಾನ್ನಿಧ್ಯ ಇರುವ, ಮಹಾತ್ಮರು ನೆಲೆಸಿ ಉನ್ನತ ಮಟ್ಟದ ಆಧ್ಯಾತ್ಮಿಕ ವಾತಾವರಣದಿಂದ ಪುನೀತಗೊಳಿಸಿದ, ನದಿ, ಸರೋವರ, ಗುಡ್ಡ, – ಇವುಗಳಿದ್ದು ಪ್ರಕೃತಿಸೌಂದರ್ಯವಿರುವ ಕ್ಷೇತ್ರಗಳೇ ತೀರ್ಥಕ್ಷೇತ್ರಗಳು. ಪ್ರತಿಯೊಂದು ಪ್ರದೇಶಕ್ಕೂ ತನ್ನದೇ ಆದ ಐತಿಹ್ಯ ಮತ್ತು ಸಂಸ್ಕೃತಿ ಇರುತ್ತದೆ. ಇದನ್ನು ಕಾಪಾಡುವುದು ಕೇವಲ ಸರ್ಕಾರದ ಕೆಲಸವಲ್ಲ. ಆಯಾ ಪ್ರದೇಶದ ನಿವಾಸಿಗಳು ಸಂಘ ಸಂಸ್ಥೆಗಳ ಮೂಲಕ ಕಾಳಜಿಯಿಂದ ಸಂರಕ್ಷಣಾ ಕಾರ್ಯದಲ್ಲಿ ತೊಡಗಬೇಕು. ಪಳೆಯುಳಿಕೆಗಳು, ಶಾಸನಗಳು, ದೇವಸ್ಥಾನಗಳು, ತೀರ್ಥಕ್ಷೇತ್ರಗಳು ಪ್ರಕೃತಿಯ ರಮಣೀಯ ಸ್ಥಳಗಳು—ಇವೆಲ್ಲ ನಮ್ಮ ಸಂಪತ್ತೆಂಬ ಅರಿವನ್ನು ಜನಸಾಮಾನ್ಯರಲ್ಲಿ ಮೂಡಿಸುವ ಕೆಲಸ ಆಗಬೇಕು. ವಿಧ್ವಂಸಕ ಕೃತ್ಯಗಳಿಂದ ಅವುಗಳನ್ನು ಹಾಳುಗೆಡವದೆ, ಕಾಪಾಡುವುದರೊಂದಿಗೆ ಪ್ರವಾಸಿಗರಿಗೆ ಸೌಲಭ್ಯ ಒದಗಿಸುವುದರ ಮೂಲಕ ಗ್ರಾಮಾಂತರ ಪ್ರದೇಶಗಳಲ್ಲೂ ಸಮೃದ್ಧಿಯ ಹೊಳೆ ಹರಿಯಬಲ್ಲದು.

ಗುಜರಾತ್ ಮತ್ತು ಮಧ್ಯಪ್ರದೇಶದ ಪ್ರೇಕ್ಷಣೀಯ ಸ್ಥಳಗಳಿಗೆ ಭೇಟಿ ನೀಡಿದ್ದ ನಮ್ಮ ಆಶ್ರಮದ ಶ್ರೀರಾಮಕೃಷ್ಣ ವಿದ್ಯಾಶಾಲೆಯ ಕಾರ್ಯನಿರ್ವಾಹಕರಾದ ಸ್ವಾಮಿ *ಮುಕ್ತಿದಾನಂದಜಿ* ಹಾಗೂ ಸ್ವಾಮಿ *ಮಹೇಶಾತ್ಮಾನಂದಜಿ* 'ವಿವೇಕಪ್ರಭ'ದ ಓದುಗರಿಗಾಗಿ ಕೆಲವು ಚಿತ್ರಗಳನ್ನು ಸಂಗ್ರಹಿಸಿ, ಮಾಹಿತಿಯನ್ನು ನೀಡಿದ್ದಾರೆ. ಛಾಯಾಗ್ರಹಣದಲ್ಲಿ ಸೆರೆಹಿಡಿದ ನಮ್ಮ ದೇಶದ ಕೆಲವು ಪ್ರಸಿದ್ಧ ತೀರ್ಥಕ್ಷೇತ್ರಗಳ ವಿಹಂಗಮ ನೋಟ ನಿಮ್ಮ ಮುಂದೆ ಇದೆ:



ಉಕ್ಕಿನ ಮನುಷ್ಯ ಸರ್ದಾರ್ ವಲ್ಲಭ ಭಾಯಿ ಪಟೇಲ್ ಪುನರ್ನಿರ್ಮಾಣ ಮಾಡಿದ ಪುರಾತನವೂ, ಪ್ರಸಿದ್ಧವೂ ಆದ ಗುಜರಾತಿನ ಸೋಮನಾಥಮಂದಿರ.

ಪೋರ್‌ಬಂದರಿನಲ್ಲಿ ಭಕ್ತ ಸುದಾಮನ ಸ್ಮೃತಿಗಾಗಿ ನಿರ್ಮಿತವಾದ ಸುಂದರ ಮಂದಿರ






ವಿವೇಕಾನಂದರು ಪರಿವ್ರಾಜಕರಾಗಿದ್ದಾಗ ಸ್ವಲ್ಪ ಕಾಲ ನೆಲೆಸಿದ್ದ ಗುಜರಾತಿನ ಪೋರಬಂದರಿನಲ್ಲಿರುವ ಭೋಜೇಶ್ವರ ಬಂಗಲೆ.




ಪೋರ್ ಬಂದರಿನ ಭೋಜೇಶ್ವರ ಬಂಗಲೆಯಲ್ಲಿ ಸ್ವಾಮಿ ವಿವೇಕಾನಂದರಿದ್ದ ಕೋಣೆಯ ಒಳನೋಟ.

ಗುಜರಾತಿನ
ಪೋರ್ ಬಂದರ್
ನಲ್ಲಿರುವ
ಮಹಾತ್ಮ
ಗಾಂಧೀಜಿಯವರ
ಜನ್ಮಸ್ಥಾನ.







ಸ್ವಾಮಿ ವಿವೇಕಾನಂದರು ನೆಲೆಸಿದ್ದ ಗುಜರಾತಿನ ಲಿಂಬ್ಡಿ ಅರಮನೆಯಲ್ಲಿ ಪ್ರದರ್ಶಿತವಾಗಿರುವ ಹಳೆಯ ತೈಲಚಿತ್ರ.



ಗೋಮತೀ ನದಿ ಸಾಗರದೊಂದಿಗೆ ಸೇರುವ ಸಂಗಮದಲ್ಲಿರುವ ಪವಿತ್ರ ದ್ವಾರಕಾ ದೇಗುಲ.



ಗುಜರಾತಿನ ಗಿರಿನಾರ್ ಪರ್ವತದ ಭವ್ಯನೋಟ.



ಮಧ್ಯಪ್ರದೇಶದ ಪುಣ್ಯನದಿ ನರ್ಮದೆಯ ನೋಟ.



ದ್ವಾದಶ ಜ್ಯೋತಿರ್ಲಿಂಗಗಳಲ್ಲಿ ಒಂದಾದ ಮಧ್ಯಪ್ರದೇಶದ ಪ್ರಸಿದ್ಧ ಓಂಕಾರೇಶ್ವರ ದೇವಾಲಯ.



ಓಂಕಾರೇಶ್ವರ ಲಿಂಗದ ಸಮೀಪ ನೋಟ.

ಜ್ಯೋತಿರ್ಲಿಂಗಗಳಲ್ಲಿ
ಒಂದಾದ ಮಧ್ಯಪ್ರದೇಶದ
ಉಜ್ಜಯಿನಿಯ ಮಹಾಕಾಲ
ಲಿಂಗದ ಸಮೀಪ
ನೋಟ.

